# ಸೇತುಬಂಧ ಸಾಫಲ್ಯ ಪರೀಕ್ಷೆ 2026-27

## ವಿಷಯ: ಕನ್ನಡ   ತರಗತಿ: 7ನೇ    ಅಂಕಗಳು: 10    ಸಮಯ: 45 ನಿ

ವಿದ್ಯಾರ್ಥಿಯ ಹೆಸರು: ___________________________________   ಹಾಜರಾತಿ ಸಂಖ್ಯೆ: ___________

---

**ಪ್ರಶ್ನೆ 1. ಕೆಳಗಿನ ಪ್ಯಾರಾವನ್ನು ಗಮನವಿಟ್ಟು ಓದಿ, ಕೊಟ್ಟಿರುವ ಪ್ರಶ್ನೆಗೆ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ:**

"ಗ್ರಂಥಾಲಯಗಳನ್ನು 'ಜ್ಞಾನದ ದೇಗುಲ' ಎಂದು ಕರೆಯಲಾಗುತ್ತದೆ. ಇಲ್ಲಿ ಕಥೆಗಳು, ಕವನಗಳು, ವಿಜ್ಞಾನ ಮತ್ತು ಇತಿಹಾಸಕ್ಕೆ ಸಂಬಂಧಿಸಿದ ವಿವಿಧ ಧರನದ ನೂರಾರು ಪುಸ್ತಕಗಳು ಲಭ್ಯವಿರುತ್ತವೆ. ನಿಶ್ಯಬ್ದವಾಗಿ ಕುಳಿತು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಲು ಗ್ರಂಥಾಲಯಗಳು ಅತ್ಯಂತ ಸೂಕ್ತವಾದ ಸ್ಥಳಗಳಾಗಿವೆ. ದಿನಾಲೂ ಪುಸ್ತಕ ಓದುವುದರಿಂದ ನಮ್ಮ ಸಾಮಾನ್ಯ ಜ್ಞಾನ ವೃದ್ಧಿಯಾಗುತ್ತದೆ."

**ಪ್ರಶ್ನೆ:** ಈ  ಗ್ರಂಥಾಲಯದಲ್ಲಿ ಯಾವ ಯಾವ ಪುಸ್ತಕಗಳು ಲಭ್ಯವಿರುತ್ತವೆ?

ಉತ್ತರ____________________________________________________________

**ಪ್ರಶ್ನೆ 2. ಕೆಳಗಿನ ಪ್ಯಾರಾವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ನಿಖರವಾದ ಉತ್ತರ ಬರೆಯಿರಿ.**

"ಬೇಸಿಗೆ ರಜೆಯಿದ್ದಿದ್ದರಿಂದ ಅನಿಲ್ ಮತ್ತು ಅವನ ತಂಗಿ ಕಾವ್ಯ ತಮ್ಮ ಅಜ್ಜಿಯ ಮನೆಗೆ ಹೋಗಲು ನಿರ್ಧರಿಸಿದರು. ಅವರ ಅಜ್ಜಿಯ ಮನೆ ಮಲೆನಾಡಿನ ಒಂದು ಸುಂದರ ಹಳ್ಳಿಯಾದ ಹಸಿರುಮನೆಯಲ್ಲಿತ್ತು. ಅಲ್ಲಿಗೆ ಹೋಗಲು ಅವರು ಬೆಳಿಗ್ಗೆಯೇ ಬಸ್ ನಿಲ್ದಾಣಕ್ಕೆ ತಲುಪಿದರು, ಏಕೆಂದರೆ ತಡವಾದರೆ ಬಸ್ ಸಿಗುವುದು ಕಷ್ಟವಾಗಿತ್ತು."

**ಅ) ಅನಿಲ್ ಮತ್ತು ಕಾವ್ಯ ಬೆಳಿಗ್ಗೆಯೇ ಬಸ್ ನಿಲ್ದಾಣಕ್ಕೆ ಏಕೆ ತಲುಪಿದರು?**

ಉತ್ತರ:_______________________________________________________________________

**ಬ) ಅನಿಲ್ ಮತ್ತು ಕಾವ್ಯ ಬೇಸಿಗೆ ರಜೆಯಲ್ಲಿ ಎಲ್ಲಿಗೆ ಹೋಗಲು ನಿರ್ಧರಿಸಿದರು.?**

ಉತ್ತರ:_______________________________________________________________________

**ಪ್ರಶ್ನೆ 3. 'ನನಗೆ ಇಷ್ಟವಾದ ರಾಷ್ಟ್ರೀಯ ಹಬ್ಬ' ಅಥವಾ 'ನಮ್ಮ ರಾಷ್ಟ್ರ ಪಕ್ಷಿ" ಎಂಬ ವಿಷಯದ ಕುರಿತು 3 ರಿಂದ 4 ಸರಳ ವಾಕ್ಯಗಳನ್ನು ಸ್ವಂತವಾಗಿ ಬರೆಯಿರಿ.**

_______________________________________________________________________________
_______________________________________________________________________________
_______________________________________________________________________________
_______________________________________________________________________________
_______________________________________________________________________________
_______________________________________________________________________________

**ಪ್ರಶ್ನೆ 4. "ಶಾಲೆಯ ಮೈದಾನದಲ್ಲಿ ನೀವೆಲ್ಲರೂ ಸ್ನೇಹಿತರು ಒಟ್ಟಾಗಿ ಕುಂಟೆಬಿಲ್ಲೆ ಅಥವಾ ಕಬಡ್ಡಿ ಆಟ ಆಡುತ್ತಿದ್ದೀರಿ. ಆಗ ನಿಮ್ಮ ತರಗತಿಯ ಹೊಸ ವಿದ್ಯಾರ್ಥಿಯೊಬ್ಬನು ಒಬ್ಬನೇ ದೂರ ನಿಂತು ನಿಮ್ಮ ಆಟವನ್ನು ನೋಡುತ್ತಿದ್ದಾನೆ. ಅವನಿಗೂ ಆಡಲು ಆಸೆಯಿದೆ ಎಂದು ನಿಮಗೆ ತಿಳಿಯುತ್ತದೆ."**

**ಪ್ರಶ್ನೆ: ಈ ಸಂದರ್ಭದಲ್ಲಿ ನೀವು ಆ ಹೊಸ ಹುಡುಗನನ್ನು ದಿನನಿತ್ಯದ ಮಾತಿನ ಶೈಲಿಯಲ್ಲಿ ಹೇಗೆ ಆಟಕ್ಕೆ ಕರೆಯುತ್ತೀರಿ?**

________________________________________________________________________________
________________________________________________________________________________
________________________________________________________________________________
________________________________________________________________________________
________________________________________________________________________________

**ಪ್ರಶ್ನೆ 5:** ಸನ್ನಿವೇಶ: ನೀನು ತರಗತಿಯಲ್ಲಿ ಕುಳಿತು ಪಾಠ ಕೇಳುತ್ತಿದ್ದಾಗ, ನಿನ್ನ ಪಕ್ಕದ ಬೆಂಚಿನ ಸ್ನೇಹಿತನ ಬಳಿ ಬರೆಯಲು ಪೆನ್ ಇಲ್ಲದೆ ತಡಕಾಡುತ್ತಿರುವುದನ್ನು ಗಮನಿಸುತ್ತೀಯ.

**ಈ ಸಂದರ್ಭದಲ್ಲಿ ಅವನಿಗೆ ತೊಂದರೆಯಾಗದಂತೆ ನೀನು ಹೇಗೆ ಸಹಾಯ ಮಾಡುತ್ತೀಯ? 2 ಸರಳ ವಾಕ್ಯಗಳಲ್ಲಿ ವಿವರಿಸಿ.**

________________________________________________________________________________
________________________________________________________________________________
________________________________________________________________________________
________________________________________________________________________________

**ಪ್ರಶ್ನೆ 6. ಕೆಳಗೆ ನೀಡಿರುವ ಪದ/ನುಡಿಗಟ್ಟುಗಳನ್ನು ಬಳಸಿಕೊಂಡು ನಿಮ್ಮ ಸ್ವಂತ ಮಾತುಗಳಲ್ಲಿ ತಲಾ ಒಂದು ಸರಳ ವಾಕ್ಯವನ್ನು ರಚಿಸಿ ಬರೆಯಿರಿ:**

**ಅ)ಆರೋಗ್ಯ:**________________________________________________________________________

________________________________________________________________________________

**ಆ)ಕೈ ಜೋಡಿಸು:**____________________________________________________________________

______________________________________________________________________________

**ಪ್ರಶ್ನೆ 7.ನಿಮ್ಮ ಶಾಲೆಯ ತೋಟದಲ್ಲಿ ಅಥವಾ ಊರಿನ ಪಾರ್ಕಿನಲ್ಲಿ ಸುಂದರವಾದ ಹೂವುಗಳು ಅರಳಿರುವ, ಚಿಟ್ಟೆಗಳು ಹಾರಾಡುತ್ತಿರುವ ಮತ್ತು ಪಕ್ಷಿಗಳು ಹಾಡುತ್ತಿರುವ ದೃಶ್ಯವನ್ನು ನೀವು ನೋಡಿದ್ದೀರಿ ಕಲ್ಪಿಸಿಕೊಳ್ಳಿ. ಈ ಸುಂದರವಾದ ದೃಶ್ಯವನ್ನು ಕಂಡಾಗ ನಿಮಗಾಗುವ ಅನುಭವ ಮತ್ತು ಸಂತೋಷವನ್ನು ನಿಮ್ಮ ಸ್ವಂತ ಮಾತುಗಳಲ್ಲಿ 3-4 ಸರಳ ವಾಕ್ಯಗಳಲ್ಲಿ ಬರೆಯಿರಿ.**

________________________________________________________________________________
________________________________________________________________________________
________________________________________________________________________________
________________________________________________________________________________
________________________________________________________________________________

**ಪ್ರಶ್ನೆ 8.ಆವರಣದಲ್ಲಿರುವ ಪದಗಳನ್ನು ಸರಿಯಾದ ಧ್ವನಿ ಹಾಗೂ ಒತ್ತಡದೊಂದಿಗೆ ಶುದ್ಧವಾಗಿ ಓದಿ, ಸರಿಯಾದ ಪದವನ್ನು ಖಾಲಿ ಜಾಗದಲ್ಲಿ ಬರೆಯಿರಿ:**

1. ಭಾರತ ನಮ್ಮ ಪುಣ್ಯ ____________ (ಭೂಮಿ / ಬೂಮಿ).

2. ಪರಿಶ್ರಮ ಪಟ್ಟರೇ ಉತ್ತಮ ___________ (ಫಲ / ಪಲ) ಸಿಗುತ್ತದೆ.

**ಪ್ರಶ್ನೆ 9. ನಿಮ್ಮ ದೊಡ್ಡಪ್ಪನ ಮಗನ ಮದುವೆ ಇರುವ ಕಾರಣದಿಂದ ನೀವು ಶಾಲೆಗೆ ಮೂರು ದಿನಗಳ ಕಾಲ ಹಾಜರಿ ಇರಲು ಸಾಧ್ಯವಾಗುವುದಿಲ್ಲ. ಹಾಗಾಗಿ ತರಗತಿ ಶಿಕ್ಷಕರಿಗೆ ಮೂರು ದಿನಗಳ ಕಾಲ ರಜೆ ನೀಡುವಂತೆ ಒಂದು ರಜಾ ಅರ್ಜಿಯನ್ನು ಬರೆಯಿರಿ.**

______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________

**ಪ್ರಶ್ನೆ 10. ನೀವು ಪ್ರತಿದಿನ ಬೆನ್ನಿಗೆ ಹಾಕಿಕೊಂಡು ಬರುವ ನಿಮ್ಮ ಶಾಲಾ ಬ್ಯಾಗ್ (School Bag) ಒಂದು ದಿನ ಇದ್ದಕ್ಕಿದ್ದಂತೆ ನಿಮ್ಮ ಬಳಿ ಬಂದು, "ಗೆಳೆಯಾ, ನನಗೆ ತುಂಬಾ ಭಾರವಾಗುತ್ತಿದೆ!" ಎಂದು ಬೇಸರ ಮಾಡಿಕೊಂಡರೆ, ನೀನು ಅದಕ್ಕೆ ಹೇಗೆ ಉತ್ತರಿಸುತ್ತೀಯ? ನಿನ್ನ ಮತ್ತು ಬ್ಯಾಗಿನ ನಡುವಿನ ಸಂಭಾಷಣೆಯನ್ನು 3 ಸರಳ ವಾಕ್ಯಗಳಲ್ಲಿ ಬರೆಯಿರಿ.**

______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________

# ಸೇತುಬಂಧ ಸಾಫಲ್ಯ ಪರೀಕ್ಷೆ 2026-27 ಉತ್ತರ ಪತ್ರಿಕೆ

**ವಿಷಯ: ಕನ್ನಡ** **ತರಗತಿ: 7ನೇ**

---

**ಪ್ರಶ್ನೆ 1.** ಉತ್ತರ: ಗ್ರಂಥಾಲಯದಲ್ಲಿ ಕಥೆಗಳು, ಕವನಗಳು, ವಿಜ್ಞಾನ ಮತ್ತು ಇತಿಹಾಸಕ್ಕೆ ಸಂಬಂಧಿಸಿದ ನೂರಾರು ಪುಸ್ತಕಗಳು ಲಭ್ಯವಿರುತ್ತವೆ.

**ಪ್ರಶ್ನೆ 2.** ಅ) ಬಸ್ ನಿಲ್ದಾಣಕ್ಕೆ ತಡವಾಗಿ ಹೋದರೆ ಬಸ್ ಸಿಗುವುದು ಕಷ್ಟವಾಗುತ್ತಿತ್ತು, ಹಾಗಾಗಿ ಅನಿಲ್ ಮತ್ತು ಕಾವ್ಯ ಬೆಳಿಗ್ಗೆಯೇ ತಲುಪಿದರು. ಬ) ಅನಿಲ್ ಮತ್ತು ಕಾವ್ಯ ಬೇಸಿಗೆ ರಜೆಯಲ್ಲಿ ಮಲೆನಾಡಿನ ಸುಂದರ ಹಳ್ಳಿಯಾದ ತಮ್ಮ ಅಜ್ಜಿಯ ಮನೆಗೆ ಹೋಗಲು ನಿರ್ಧರಿಸಿದರು.

**ಪ್ರಶ್ನೆ 3.** (ನಮ್ಮ ರಾಷ್ಟ್ರ ಪಕ್ಷಿ - ಉದಾಹರಣೆ) ನಮ್ಮ ರಾಷ್ಟ್ರ ಪಕ್ಷಿ ನವಿಲು. ನವಿಲು ನೋಡಲು ಬಹಳ ಸುಂದರವಾಗಿದೆ. ಮಳೆಗಾಲದಲ್ಲಿ ನವಿಲು ಗರಿ ಬಿಚ್ಚಿ ಕುಣಿಯುವುದನ್ನು ನೋಡುವುದು ಆನಂದದಾಯಕ. ಇದು ನಮ್ಮ ದೇಶದ ವೈಭವದ ಸಂಕೇತವಾಗಿದೆ.

**ಪ್ರಶ್ನೆ 4.** ಉತ್ತರ: "ಹಲೋ ಗೆಳೆಯ, ನೀನು ಯಾಕೆ ಅಲ್ಲಿ ಒಬ್ಬನೇ ನಿಂತಿದ್ದೀಯ? ಬಾ, ನಮ್ಮ ಜೊತೆ ಕಬಡ್ಡಿ ಆಡೋಣ, ತುಂಬಾ ಮಜಾ ಇರುತ್ತೆ!"

**ಪ್ರಶ್ನೆ 5.** ಉತ್ತರ: ನಾನು ತರಗತಿ ನಡೆಯುತ್ತಿರುವಾಗ ಶಬ್ದ ಮಾಡದೆ, ನಿಧಾನವಾಗಿ ನನ್ನ ಬಳಿಯಿದ್ದ ಮತ್ತೊಂದು ಪೆನ್ ಅನ್ನು ಅವನ ಟೇಬಲ್ ಮೇಲೆ ಇಡುತ್ತೇನೆ. ಅವನು ಪೆನ್ ತೆಗೆದುಕೊಂಡಾಗ ಅವನಿಗೆ ಅರ್ಥವಾಗುವಂತೆ ಒಂದು ಸಣ್ಣ ನಗು ನಕ್ಕು ಸುಮ್ಮನಾಗುತ್ತೇನೆ.

**ಪ್ರಶ್ನೆ 6.** ಅ) ಆರೋಗ್ಯ: ಪ್ರತಿದಿನ ವ್ಯಾಯಾಮ ಮಾಡುವುದರಿಂದ ನಮ್ಮ ಆರೋಗ್ಯ ಉತ್ತಮವಾಗಿರುತ್ತದೆ. ಆ) ಕೈ ಜೋಡಿಸು: ಶಾಲೆಯ ಸ್ವಚ್ಛತಾ ಕಾರ್ಯಕ್ರಮದಲ್ಲಿ ನಾವೆಲ್ಲರೂ ಕೈ ಜೋಡಿಸಿದ್ದೇವೆ.

**ಪ್ರಶ್ನೆ 7.** ಹೂವಿನ ತೋಟದಲ್ಲಿ ಚಿಟ್ಟೆಗಳು ಹಾರಾಡುವುದನ್ನು ನೋಡಿದಾಗ ಮನಸ್ಸಿಗೆ ಬಹಳ ಶಾಂತಿ ಸಿಗುತ್ತದೆ. ಪಕ್ಷಿಗಳ ಕಲರವ ಕೇಳುತ್ತಿದ್ದರೆ ಇಡೀ ದಿನ ಅಲ್ಲಿಯೇ ಕುಳಿತುಕೊಳ್ಳಬೇಕು ಎನಿಸುತ್ತದೆ. ಇಂತಹ ಸುಂದರ ಪ್ರಕೃತಿಯನ್ನು ನೋಡುವುದು ಕಣ್ಣಿಗೆ ಹಬ್ಬ ಮತ್ತು ಮನಸ್ಸಿಗೆ ದೊಡ್ಡ ಸಂತೋಷ ನೀಡುತ್ತದೆ.

**ಪ್ರಶ್ನೆ 8.**

1. ಭೂಮಿ
2. ಫಲ

**ಪ್ರಶ್ನೆ 9.**

**ದಿನಾಂಕ:** 31-05-2026

**ಸ್ಥಳ:** ಕಾರವಾರ

**ಇಂದ,**

[ನಿಮ್ಮ ಹೆಸರು]

7ನೇ ತರಗತಿ

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚೆಂಡಿಯಾ ನಂ 1.

**ಇಗೆ,**

ತರಗತಿ ಶಿಕ್ಷಕರು,

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚೆಂಡಿಯಾ ನಂ 1.

**ಮಾನ್ಯರೇ,**

**ವಿಷಯ: ಮೂರು ದಿನಗಳ ಕಾಲ ರಜೆ ಕೋರಿ ಅರ್ಜಿ.**

ನನ್ನ ದೊಡ್ಡಪ್ಪನ ಮಗನ ಮದುವೆಯು [ಮದುವೆಯ ದಿನಾಂಕ] ರಂದು ಇರುವುದರಿಂದ, ನಾನು ಆ ಸಮಾರಂಭದಲ್ಲಿ ಭಾಗವಹಿಸಬೇಕಾಗಿದೆ. ಈ ಕಾರಣದಿಂದಾಗಿ, ದಿನಾಂಕ [ಆರಂಭದ ದಿನಾಂಕ] ರಿಂದ [ಕೊನೆಯ ದಿನಾಂಕ] ರವರೆಗೆ ಒಟ್ಟು ಮೂರು ದಿನಗಳ ಕಾಲ ಶಾಲೆಗೆ ಹಾಜರಾಗಲು ನನಗೆ ಸಾಧ್ಯವಾಗುವುದಿಲ್ಲ.

ಆದುದರಿಂದ, ದಯವಿಟ್ಟು ನನಗೆ ಮೂರು ದಿನಗಳ ಕಾಲ ರಜೆ ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

**ತಮ್ಮ ವಿಧೇಯ ವಿದ್ಯಾರ್ಥಿ,**

(ಸಹಿ) [ನಿಮ್ಮ ಹೆಸರು]

**ಪ್ರಶ್ನೆ 10.** ಬ್ಯಾಗ್: "ಗೆಳೆಯಾ, ನನಗೆ ತುಂಬಾ ಭಾರವಾಗುತ್ತಿದೆ!" ನಾನು: "ಅಯ್ಯೋ, ನಿನ್ನ ಕಷ್ಟ ನನಗೆ ಅರ್ಥವಾಯಿತು. ನಾಳೆಯಿಂದ ನಾನು ಪಠ್ಯಕ್ರಮಕ್ಕೆ ಬೇಕಾದ ಪುಸ್ತಕಗಳನ್ನು ಮಾತ್ರ ಇಟ್ಟುಕೊಳ್ಳುತ್ತೇನೆ, ಬೇಡದ ವಸ್ತುಗಳನ್ನು ತೆಗೆದುಹಾಕುತ್ತೇನೆ." ಬ್ಯಾಗ್: "ತುಂಬಾ ಧನ್ಯವಾದಗಳು ಗೆಳೆಯಾ, ಈಗ ನನಗೆ ಹಗುರವಾಗುತ್ತಿದೆ!"